# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 190

ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ

ಉತ್ತರಿಸುವ ದಿನಾಂಕ : 10-12-2018

ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ವಸತಿ ನಿಲಯಗಳಲ್ಲಿ ಈಗಾಗಲೇ ಮಂಜೂರಾದ ಗ್ರಂಥಾಲಯ ಮತ್ತು ಕಂಪ್ಯೂಟರ್ ಲ್ಯಾಬ್ ಇವುಗಳ ನಿರ್ವಹಣೆಗಾಗಿ ಮತ್ತು ತರಬೇತಿಗಾಗಿ ಸಿಬ್ಬಂದಿಗಳನ್ನು ನೇಮಿಸಲಾಗಿದೆಯೇ; ಇಲ್ಲದಿದ್ದರೆ ನೇಮಕಾತಿ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ; | ವಿದ್ಯಾರ್ಥಿನಿಲಯಗಳಲ್ಲಿನ ಕಂಪ್ಯೂಟರ್ ಲ್ಯಾಬ್ ಹಾಗೂ ಗ್ರಂಥಾಲಯಗಳನ್ನು ಅಲ್ಲಿನ ನಿಲಯ ಮೇಲ್ವಿಚಾರಕರೇ ನಿರ್ವಹಿಸುತ್ತಿರುತ್ತಾರೆ. ಇದಕ್ಕೆ ಪ್ರತ್ಯೇಕವಾಗಿ ಸಿಬ್ಬಂದಿಗಳನ್ನು ನೇಮಕಾತಿ ಮಾಡುವ ಪ್ರಸ್ತಾವ ಸರ್ಕಾರದ ಪರಿಶೀಲನೆಯಲ್ಲಿಲ್ಲ. |
| ಆ) | ವಸತಿ ನಿಲಯದ ವಿದ್ಯಾರ್ಥಿಗಳಿಗೆ ರಾತ್ರಿ ಪಾಠದ (Tution) ವ್ಯವಸ್ಥೆ ಕಲ್ಪಿಸಲಾಗಿದೆಯೇ; ಕಲ್ಪಿಸಿದ್ದರೆ ಯಾವ ಸಮಯದಲ್ಲಿ ನಿಗಧಿಪಡಿಲಾಗಿದೆ; ವರ್ಷದಲ್ಲಿ ಎಷ್ಟು ಸಮಯ ನಿಗಧಿಪಡಿಸಲಾಗಿದೆ; | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ವಿಶೇಷವಾಗಿ ವಿಜ್ಞಾನ, ಗಣಿತ ಮತ್ತು ಇಂಗ್ಲೀಷ್ ವಿಷಯಗಳಲ್ಲಿ ಅನುಭವ ಹಾಗೂ ನುರಿತ ಶಿಕ್ಷಕರಿಂದ ಪ್ರತಿ ವಿದ್ಯಾರ್ಥಿನಿಲಯಕ್ಕೆ 03 ಬೋಧಕರಂತೆ 10 ತಿಂಗಳ ಅವಧಿಗೆ ಶಾಲಾ ಸಮಯ ಹೊರತುಪಡಿಸಿ, 3 ಗಂಟೆಗಳ ಕಾಲ ಬೋಧನ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. |
| ಇ) | ರಾಜ್ಯದಲ್ಲಿ ಸರ್ಕಾರಿ ವಸತಿ ನಿಲಯಗಳ ಸ್ವಂತ ಕಟ್ಟಡಗಳೆಷ್ಟು; ಖಾಸಗಿ ಕಟ್ಟಡಗಳಲ್ಲಿ ನಡೆಯುತ್ತಿರುವ ವಸತಿ ನಿಲಯಗಳೆಷ್ಟು; ಇವುಗಳಿಗೆ ಸ್ವಂತ ಕಟ್ಟಡ ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ? | ವಿವರಗಳು ಕೆಳಕಂಡಂತಿದೆ.<br>(see table below)<br>ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಿಗೆ ನಿವೇಶನ/ಅನುದಾನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದು. |

| ವಿವರ | ಪ.ಜಾ | ಪ.ಪಂ | ಒಟ್ಟು |
|---|---|---|---|
| ಸ್ವಂತ ಕಟ್ಟಡ | 1462 | 151 | 1613 |
| ಬಾಡಿಗೆ ಕಟ್ಟಡ | 345 | 104 | 449 |
| ಬಾಡಿಗೆ ರಹಿತ | 60 | - | 60 |

ಸಕಇ 568 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

| | | |
|---|---|---|
| ಊ) | ಇದರಿಂದ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ಸರಿದೂಗಿಸಲು ಯಾವ ಕಾಲಮಿತಿಯಲ್ಲಿ ಕ್ರಮ ವಹಿಸಲಾಗುವುದು. | ಪ್ರಸ್ತುತ ಚಾಲ್ತಿಯಲ್ಲಿರುವ ಭೋಜನಾ ವೆಚ್ಚದ ದರಗಳಲ್ಲಿಯೇ **ಪೌಷ್ಠಿಕ/** ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳನ್ನು ಪೂರೈಸ**ಲಾಗುತ್ತಿದೆ.** ಇದಲ್ಲದೇ ಸಮವಸ್ತ್ರ, ನೋಟ್‌ಪುಸ್ತಕ, ಪೆನ್ನು, ಶೂ **ಸಾಕ್ಸ್** ಇತ್ಯಾದಿಗಳನ್ನು ನಿಗದಿತ ಅವಧಿಯಲ್ಲಿ ಪೂರೈಸಲಾಗುತ್ತಿದೆ. |

ಸಕಇ 615 ಮೊದೇಶಾ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.